ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ: 1783-2013

ಚಾಸಾ : 8 ಪ್ರಾಸಾ : 6

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು

ದಿನಾಂಕ: 27-10-2016

ವಾಗ್ಮೂಲದವರ ಹೆಸರು : ದಿನೇಶ
ತಂದೆ ಹೆಸರು : ನಾಗಪ್ಪ ಆಚಾರಿ
ವಯಸ್ಸು : 41ವರ್ಷ
ಉದ್ಯೋಗ : ಸೆಂಟ್ರಿಂಗ್
ವಾಸಸ್ಥ ಳ : ಕಂಡ್ಲೂರು

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ:

ಶಾಸ್ತ್ರಿ ಸರ್ಕಲ್ ಬಳಿ ಮಾಡಲಾದ ದಿ.9.1.2013ರ ದಸ್ತಗಿರಿ ಮಹಜರಿನಲ್ಲಿ ಸಾಕ್ಷಿ ತನ್ನ ಸಹಿಯ ಗುರುತಿಸಿದ್ದು ಅದನ್ನು ಸುಮಾರು 2-3 ವರ್ಷಗಳ ಹಿಂದೆ ಕುಂದಾಪುರ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು ಅದರಲ್ಲಿ ಬರೆದ ವಿಚಾರಗಳು ನನಗೆ ತಿಳಿದಿರುವುದಿಲ್ಲ. ಪೋಲೀಸರು ಯಾವ ಕಾರಣಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಮಹಜರನ್ನು ಮಾಡಿರುವುದಿಲ್ಲ ಮತ್ತು ಯಾರನ್ನು ದಸ್ತಗಿರಿ ಮಾಡಿರುವುದಿಲ್ಲ. ಸದ್ರಿ ಮಹಜರನ್ನು ನಿ.ಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಿದೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿಸಲಾಯಿತು)

ಪಾಟೀ ಸವಾಲು: ಮಾನ್ಯ ಸ.ಸ. ಅ.ರವರಿಂದ:

2. ದಿ.9.1.2013ರಂದು ಕುಂದಾಪುರ ಪೋಲೀಸರು ಶಾಸ್ತ್ರಿಸರ್ಕಲ್ ಬಳಿ ಅನುಮಾನಾಸ್ಪದವಾಗಿ ನಿಂತಿದ್ದ 2ನೇ ಆರೋಪಿಯನ್ನು ನನ್ನ ಸಮಕ್ಷಮ ನಿ.ಪಿ.8 ಮಹಜರು ಮುಖೇನ ದಸ್ತಗಿರಿ ಮಾಡಿ ವಿಚಾರಿಸಿದಾಗ ಆತನು ದಿ.27.11.2012ರಂದು ರಾತ್ರಿ 11.00ಗಂಟೆ ಸಮಯದಲ್ಲಿ ಕಟ್ಟೇದೇವರ ಉತ್ಸವದ ಪೂಜೆ ಮುಗಿಸಿ ವಾಪಾಸು ಬರುತ್ತಿರುವಾಗ ದೇವರ ದೀಪ ಹಿಡಿದುಕೊಂಡು ಬರುತ್ತಿದ್ದ ಒಬ್ಬ ಮಹಿಳೆಯ ಕರಿಮಣಿ ಸರ

ಹಾಗೂ ಹವಳದ ಸರವನ್ನು ಎಳೆದುಕೊಂಡು ಹೋಗಿರುವುದಾಗಿ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.